ಶ್ರೀ ಅಬ್ದುಲ್ ನಜೀರ್ ಸಾಬ್.(ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು)—

ಅ) ಮೈಸೂರು ಜಿಲ್ಲೆಯಲ್ಲಿ ಒಟ್ಟು ೨೨,೬೪೪ ಜೀತ ವಿಮುಕ್ತರಿದ್ದಾರೆ.

ಆ) ೬೪೩೭ ಜನರಿಗೆ.

ಇ) ನಂಜನಗೂಡು ತಾಲ್ಲೂಕಿನಲ್ಲಿ ಒಟ್ಟು ೭೮೫೦ ಜನ ಜೀತ ವಿಮುಕ್ತರಿದ್ದಾರೆ.

ಈ) ಈವರೆಗೆ ೫೮೨ ಜನರಿಗೆ ಪರಿಹಾರ ದೊರಕಿದೆ. ಪರಿಹಾರ ಕಲ್ಪಿಸುವ ಕಾರ್ಯ ಇನ್ನು ಪ್ರಗತಿಯಲ್ಲಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಕೊರತೆ ಬಗ್ಗೆ

೬೮೯. ಶ್ರೀ ಎಂ ಎಲ್ ಮಂತ್ರಣ್ಣವರ್ (ಗೋಕಾಕ್)— ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗೋಕಾಕ್ ತಾಲ್ಲೂಕಿನಲ್ಲಿರುವ ಮಮದಾಪುರಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡಲಾಗುವುದೇ?

ಆ) ಹಾಗಿದ್ದಲ್ಲಿ ಯಾವಾಗ ಮಾಡಲಾಗುವುದು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮಂತ್ರಿ ವಕ್ಫ್ ಮಂತ್ರಿಗಳು)

ಅ) ಮಾಡಲಾಗುವುದು.

ಆ) ೨೦೦ ಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರುವ ಎಲ್ಲಾ ಗ್ರಾಮಗಳಿಗೆ ನಳದ ನೀರು ಸರಬರಾಜು ಯೋಜನೆಯ ಮೂಲಕ ನೀರು ಪೂರೈಸುವ ರಾಜ್ಯ ಸರ್ಕಾರದ ಯೋಜನೆಯಿದ್ದು ಇದನ್ನೂ ಹಂತ ಹಂತವಾಗಿ ಕಾರ್ಯಗತಗೊಳಿಸಲಾಗುತ್ತಿದೆ. ಈ ಗ್ರಾಮವೂ ಸಹ ೨೦೦೦ ಕ್ಕೂ ಮೇಲ್ಪಟ್ಟ ಜನಸಂಖ್ಯೆ ಹೊಳ್ಳದ್ದಾಗಿರುವುದರಿಂದ ಆದಷ್ಟು ಬೇಗ ಮಾಡಲಾಗುವುದು.

ಕುಡಿಯುವ ನೀರಿನ ಪೂರೈಕೆ ಬಗ್ಗೆ

೬೮೮. ಶ್ರೀ ಎಮ್.ಎಲ್. ಮಂತ್ರಣ್ಣನವರ (ಗೋಕಾಕ್).—ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೫ರಲ್ಲಿ ಈರನಹಟ್ಟಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಯು ಮಂಜೂರಾಗಿದ್ದರೂ ಇನ್ನೂವರೆಗೆ ಕೆಲಸ ಪೂರ್ಣವಾಗದಿರಲು ಕಾರಣಗಳೇನು ?

ಆ) ಕಾಮಗಾರಿ ಯಾವಾಗ ಮುಗಿಯಬಹುದು ಹಾಗೂ ಜನರಿಗೆ ನೀರನ್ನು ಯಾವತ್ತಿನಿಂದ ಪೂರೈಕೆ ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಈರನಹಟ್ಟಿ ಗ್ರಾಮದ ನೀರು ಸರಬರಾಜು ಯೋಜನೆಯು ಪೂರ್ಣವಾಗದಿರಲು ಕಾರಣಗಳು,—

೧) ಈ ಯೋಜನೆಗೆ ಕೊಳವೆ ಬಾವಿಯನ್ನು ಆವಲಂಬಿಸತಕ್ಕ ಜಲಮೂಲವನ್ನಾಗಿರಿಸಿ ಕೊರೆಯಲಾದ ಬಾವಿಯಲ್ಲಿ ನೀರು ಸವಳು ಇದ್ದುದರಿಂದ ಬೇರೆ ಜಲಮೂಲಕ್ಕಾಗಿ ಶೋಧನೆ ನಡೆಸಬೇಕಾಗಿ ಬಂದಿತು,

೨) ಶೋಧನೆ ಮಾಡಿ ಕೊರೆಯಲಾದ ಕೊಳವೆ ಬಾವಿಯಲ್ಲೂ ಇಳುವರಿ ಕಡಿಮೆ ಬಂದಿರುತ್ತದೆ.

ಈ ಗ್ರಾಮದಲ್ಲಿ ಹಾಗೂ ಅದರ ಸುತ್ತಮುತ್ತ ಕೊಳವೆ ಬಾವಿಗಳಿಂದ ಸಾಕಷ್ಟು ಪ್ರಮಾಣದಲ್ಲಿ ನೀರು ದೊರೆಯುವ ಸಾಧ್ಯತೆ ಇಲ್ಲವೆಂದು ಭೂ ವಿಜ್ಞಾನಿಗಳು ಅಭಿಪ್ರಾಯ ಪಟ್ಟಿರುತ್ತಾರೆ. ಆದುದರಿಂದ ತೆರೆದ ಬಾವಿಯನ್ನು ಜಲಮೂಲವನ್ನಾಗಿ ತೆಗೆದುಕೊಳ್ಳಲು ಯೋಚಿಸಲಾಗಿದೆ,